ಹೊಣೆಯನ್ನು ಯುವರಾಜರೇ ಹೊರಬೇಕಾಗುತ್ತದೆ.

ಅಪ್ಪಾಜಿರಾಜ ತಲ್ಲಣಿಸಿ ಹೋದರೂ ತಲೆಯೆತ್ತಲಿಲ್ಲ. ಅವನು ಅವಳ ಆತ್ಮಹತ್ಯೆಗೆ ಪ್ರೇರಣೆ ನೀಡಿರಲಿಲ್ಲ. ಅವಳಿಂದ ಒಂದು ಸಮಸ್ಯೆಗೆ ಪರಿಹಾರ ಬಯಸಿದ್ದ. ಅವಳೋ ಅನಗತ್ಯವಾಗಿ ಕೊಳಕ್ಕೆ ಹಾರಿ ಪರಿಹಾರವೇ ಇಲ್ಲದ ಸಮಸ್ಯೆಯನ್ನು ಸೃಷ್ಟಿಸಿದ್ದಳು. ಅವಳೇನು ಅಳುಬುರುಕಿ ಜಗಳಗಂಟಿ ಹೆಣ್ಣಾಗಿರಲಿಲ್ಲ. ಅವಳು ದಾಂಪತ್ಯವನ್ನು ಪರಿಭಾವಿಸಿದ ರೀತಿಯೇ ಬೇರಿತ್ತು. ಹೆಣ್ಣಾದವಳು ಪತಿವ್ರತೆಯಾಗಿರಬೇಕು ಮತ್ತು ಪತಿವ್ರತೆಯಾದವಳು ಗಂಡನಲ್ಲಿ ಯಾವುದೇ ಕಾರಣಕ್ಕೆ ವಾದಿಸುವುದು ತಪ್ಪು ಎಂದು ಭಾವಿಸಿದವಳು. ಪತಿ ಬಯಸಿದಾಗಲೆಲ್ಲಾ ಅವಳು ಮರು ಮಾತನಾಡದೆ ತನ್ನನ್ನು ಅರ್ಪಿಸಿ ಅದೇ ಸತೀ ಧರ್ಮ ಎಂದು ಭಾವಿಸಿದವಳು. ಅವಳಿಗೆ ಸಮಾಗಮವು ಮೈಮನ ಅರಳಿಸದ ಒಂದು ಜಡ ಧಾರ್ಮಿಕ ಕ್ರಿಯೆಯಾಗಿತ್ತು. ಅವಳು ಅಪ್ಪಿತಪ್ಪಿಯೂ ಒಂದೇ ಒಂದು ರಸಿಕತನದ ಮಾತನ್ನು ಆಡಿದವಳಲ್ಲ. ಅಪ್ಪಾಜಿ ರಾಜನ ಬಾಯಲ್ಲಿ ಅಂತಹ ಮಾತು ಬಂದರೆ, "ಶಿವ ಶಿವ ರಾಜವಂಶರ ಬಾಯಲ್ಲಿ ಇಂತಹ ಮಾತೇ?" ಎಂದು ಆಕ್ಷೇಪಿಸುತ್ತಿದ್ದಳು. ಅಪ್ಪಾಜಿ ರಾಜನಾದರೋ ಮಹಾ ರಸಿಕ. ವಾತ್ಸಾಯನನ ಕಾಮಸೂತ್ರಗಳನ್ನು ಓದಿ ಮನದಟ್ಟು ಮಾಡಿಕೊಂಡವನು. ಅವುಗಳ ಅನುಷ್ಠಾನಕ್ಕೆ ನೀಲಾಂಬಿಕಾ ದೇವಿಯನ್ನು ಒತ್ತಾಯಿಸುತ್ತಿದ್ದನು. ಅವಳು ಆಸನ ಬದಲಾವಣೆಗೂ ಒಪ್ಪುತ್ತಿರಲಿಲ್ಲ. ಸುಮ್ಮನೆ ಸ್ಪಂದನವಿಲ್ಲದ ಮರದ ಕೊರಡಿನಂತೆ ಬಿದ್ದುಕೊಂಡು ಸಮಾಗಮದ ಬಳಿಕ ಮಗ್ಗುಲಾಗಿ ನಿದ್ದೆ ಹೋಗುತ್ತಿದ್ದಳು.

ಆದರೆ ಹಗಲಿಡೀ ಅವಳು ಚಿಗರೆಯಂತೆ ಓಡಾಡಿಕೊಂಡು ಕೆಲಸ ಮಾಡುತ್ತಿದ್ದಳು. ದೊಡ್ಡ ವೀರಪ್ಪ ದೊರೆಗೆ ತನ್ನ ಸೊಸೆಯೆಂದರೆ ಪ್ರಾಣ. ಎಲ್ಲರಲ್ಲೂ ಅವಳು ಹೊಂದಿಕೊಂಡು ಹೋಗುತ್ತಿದ್ದಳು. ಅರಮನೆಯ ಸೇವಕ, ಸೇವಿಕೆಯರು ಅವಳನ್ನು ತುಂಬಾ ಹಚ್ಚಿಕೊಂಡಿದ್ದರು. ಅಪ್ಪಾಜಿರಾಜ ತನ್ನ ದುರವಸ್ಥೆಯನ್ನು ಯಾರಲ್ಲಿ ಹೇಳಿ ಗೊತ್ತಾಗದೆ ಒಳಗೊಳಗೆ ಕೊರಗುತ್ತಿದ್ದ. ಅಪ್ಪಾಜಿರಾಜನಿಗೆ ದಾಂಪತ್ಯ ಜೀವನ ನೀರಸವೆನಿಸತೊಡಗಿದಾಗ ಅವನ ಬಾಳಲ್ಲಿ ಪ್ರವಹಿಸಿದವಳು ಕಾವೇರಿ. ಅವಳು ಕೂಡ ಕೊಡಗರ ಹೆಣ್ಣೆ. ಅವಳದು ಹಸ್ತಿನಿ, ಚಿತ್ತಿನಿ, ಶಂಕಿನಿ, ಪದ್ಮಿನಿ ಎಲ್ಲಾ ಹೆಣ್ಣುಗಳ ಏಕೀಕೃತ ಎರಕ ಯೌವನದಿಂದ ಪುಟಿಯುವ ಅಂಗಾಂಗಳ ಹೂ ನಗೆಯ ಕಾವೇರಿಯನ್ನು ಅವನು ಮನಸಾರೆ ಪ್ರೀತಿಸುತ್ತಿದ್ದ. ಅವಳೊಡನೆ ಸಮಾಗಮವೆಂದರೆ ಅದು ಎಂದೂ ಬತ್ತದ ಜೀವ ಸೆಲೆಯ ಪ್ರಕೃತಿಯ ಆರಾಧನೆಯೆಂದು ಅವನಿಗನಿಸುತ್ತಿತ್ತು. ಅವಳು ಸದಾ ಕಾಲ ಅವನ ನರನಾಡಿಗಳಲ್ಲಿ ಹೊಸ ಜೀವ ತುಂಬುವ, ಮನದಲ್ಲಿ ಹೊಸ ವರ್ಣ ಭಾವಗಳನ್ನು ಮೂಡಿಸುವ ಸ್ಫೂರ್ತಿಯ ಸೆಲೆಯಾಗಿದ್ದಳು. ಬಯಸಿದಾಗೆಲ್ಲಾ ಭೋರ್ಗರೆಯುವ ಆಷಾಢದ ಕಾವೇರಿಯಾಗಿ ಬಿಡುತ್ತಿದ್ದಳು.

ನೀಲಾಂಬಿಕಾ ದೇವಿಯದಾದರೋ ತೀರಾ ವ್ಯತಿರಿಕ್ತ ಸ್ವಭಾವವಾಗಿತ್ತು. ಸಮಾಗಮ ಕಾಲದ ಅವಳ ಜಡತೆ ದೈಹಿಕ ಸ್ವರೂಪದ್ದೋ, ಮಾನಸಿಕ ತೊಂದರೆಯೋ ಎಂದು ಅಪ್ಪಾಜಿ ರಾಜನಿಗೆ ಗೊತ್ತಾಗುತ್ತಿರಲಿಲ್ಲ. ಕೊಡಗರ ಛಾಯಾಕಾರ್ತಿ ಮೂಡಿ ಶಿವಾಚಾರದವಳಾಗಿ ಲಿಂಗಧಾರಣೆ ಮಾಡಿ ನೀಲಾಂಬಿಕಾ ದೇವಿಯಾದ ಮೇಲೆ ಅವಳು ಹಾಗಾಗಿರಬೇಕೆಂದು ಅಪ್ಪಾಜಿರಾಜ ಅಂದು ಕೊಳ್ಳುತ್ತಿದ್ದ. ಅರಮನೆಯಲ್ಲಿ ಆಗಾಗ ವ್ರತಗಳು, ಪೂಜೆಗಳು ನಡೆಯುತ್ತಿದ್ದವು. ಅಂತಹ ದಿನಗಳಲ್ಲಿ ದಿನವಿಡೀ ಮಡಿಯುಟ್ಟುಕೊಂಡು ಅವನಿಂದ ದೂರವಿರುತ್ತಿದ್ದ, ನೀಲಾಂಬಿಕಾ ದೇವಿ ರಾತ್ರಿ ಹೊತ್ತು ಸಮಾಗಮವನ್ನು ಖಡಾ ಖಂಡಿತವಾಗಿ ನಿರಾಕರಿಸಿಬಿಡುತ್ತಿದ್ದಳು. ಆ ದಿನಗಳಲ್ಲಿ ಅವಳು ಅಪ್ಪಾಜಿರಾಜನಿಂದ ದೂರ ಮಲಗಿ ಬಿಡುತ್ತಿದ್ದಳು.

ನೀಲಾಂಬಿಕಾ ದೇವಿಯ ಹೊಟ್ಟೆಯಲ್ಲಿ ಚಿಕ್ಕ ವೀರಪ್ಪ ಬೆಳೆಯುತ್ತಿದ್ದಾಗ ಅವಳಿಗೆ ಅಕ್ಕ